ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 09-10-1971.

***ಶಕ್ತಿಶಾಲಿ (ಪವರ್‌ಫುಲ್) ವೃತ್ತಿಯಿಂದ ಸೇವೆಯಲ್ಲಿ ವೃದ್ಧಿ*** (पावरफुल वृत्ति से सर्विस में वृद्धि)

ಇಂದು ಈ ಸಂಘಟನೆಗೆ ಯಾವ ಲಕ್ಷ್ಯದಿಂದ ಸೇರಿದ್ದೀರಿ? ಸಂಘಟನೆಯಲ್ಲಿ ಪ್ರಾಪ್ತಿಯಂತೂ ಆಗುತ್ತದೆ ಆದರೆ ಪರಸ್ಪರ ಸೇರಿರುವ ಲಕ್ಷ್ಯ ಯಾವುದನ್ನು ಇಟ್ಟುಕೊಂಡಿದ್ದೀರಿ? ಏನಾದರೂ ಹೊಸ ಪ್ಲಾನನ್ನು ಯೋಚಿಸಿದ್ದೀರಾ? ಏಕೆಂದರೆ ಈ ಸಂಘಟನೆ ಸರ್ವಶ್ರೇಷ್ಠ ಆತ್ಮರ ಹಾಗೂ ಸಮೀಪ ಆತ್ಮರ ಸಂಘಟನೆಯಾಗಿದೆ. ಎಲ್ಲರ ದೃಷ್ಟಿ ಸಮೀಪ ಮತ್ತು ಶ್ರೇಷ್ಠ ಆತ್ಮರ ಮೇಲಿದೆ. ಅಂದಮೇಲೆ ಶ್ರೇಷ್ಠ ಆತ್ಮರು ಸೇವೆಯಲ್ಲಿ ಹಾಗೂ ತಮ್ಮ ಸಂಘಟನೆಯಲ್ಲಿ ಶ್ರೇಷ್ಠತೆ ಹಾಗೂ ನವೀನತೆಯನ್ನು ಹೇಗೆ ತರುವುದು ಎಂಬುದನ್ನು ಯೋಚಿಸಬೇಕಾಗಿದೆ. ನವೀನತೆಯೆಂದು ಯಾವುದಕ್ಕೆ ಹೇಳಲಾಗುತ್ತದೆ? ನವೀನತೆ ಅರ್ಥಾತ್ ಯಾವುದಾದರೂ ಸಹಜವಾದ ಆದರೆ ಶಕ್ತಿಶಾಲಿಯಾದ ಪ್ಲಾನನ್ನು ತಯಾರು ಮಾಡಿ ಯಾವ ಶಕ್ತಿಶಾಲಿ ಪ್ಲಾನ್ ಪವರ್‌ನ ಮೂಲಕ ಆತ್ಮರನ್ನು ಆಕರ್ಷಣೆ ಮಾಡಬೇಕು. ಇಂತಹ ಪ್ಲಾನ್ ಮಾಡಿ ದೂರದಿಂದಲೇ ಆತ್ಮರಿಗೆ ಆಕರ್ಷಣೆಯಾಗಬೇಕು. ಹೇಗೆ ಪತಂಗಗಳು ಜ್ಯೋತಿಯ ಆಕರ್ಷಣೆಯಲ್ಲಿ ದೂರ-ದೂರದಲ್ಲಿದ್ದರೂ ಸಹ ಆಕರ್ಷಿತವಾಗಿ ಬರುತ್ತವೆ. ಅಥವಾ ಯಾವುದೇ ತೀಕ್ಷ್ಣ ಬೆಂಕಿಯು ಪ್ರಜ್ವಲಿಸುತ್ತಿದ್ದರೆ ದೂರದಿಂದಲೇ ಅದರ ಶಾಖದ ಅನುಭವವಾಗುತ್ತದೆ. ಇಲ್ಲಿ ಯಾವುದೋ ಬೆಂಕಿಯಿದೆ ಎಂದು ತಿಳಿದುಕೊಳ್ಳುತ್ತಾರೆ. ಯಾವುದೇ ತುಂಬಾ ತಣ್ಣಗಿರುವ ವಸ್ತುವಿದ್ದರೆ ಅದು ದೂರದಿಂದಲೇ ಅದರ ಶೀತಲತೆಯ ಅನುಭವ ಮತ್ತು ಆಕರ್ಷಣೆಯೂ ಆಗುತ್ತದೆ. ಅದೇರೀತಿ ತಮ್ಮ ರೂಪವನ್ನು ಹಾಗೂ ಸರ್ವೀಸಿನ ರೂಪರೇಖೆಯನ್ನು ಈ ರೀತಿ ತಯಾರು ಮಾಡಿಕೊಳ್ಳಿರಿ. ದೂರದಿಂದಲೇ ಆಕರ್ಷಣೆಯಾಗುತ್ತಾ ಆತ್ಮರು ಸಮೀಪ ಬರಲಿ, ಹೇಗೆ ವಾಯು ಮಂಡಲದಲ್ಲಿ ಯಾವುದೇ ವಸ್ತು ಹರಡಿದರೆ ಇಡೀ ವಾಯುಮಂಡದಲ್ಲಿ ಬಹಳಷ್ಟು ದೂರದವರೆಗೆ ಅದರ ಪ್ರಭಾವ ಬೀರುತ್ತದೆ. ಅದೇರೀತಿ ಇಷ್ಟೆಲ್ಲಾ ಸಹಜಯೋಗಿ ಹಾಗೂ ಶ್ರೇಷ್ಠ ಆತ್ಮರು ತಮ್ಮ ವಾಯುಮಂಡಲವನ್ನುಈ ರೀತಿ ಆತ್ಮೀಕವನ್ನಾಗಿ ಮಾಡಿಕೊಳ್ಳಿರಿ. ಸುತ್ತಮುತ್ತಲಿನ ವಾಯುಮಂಡಲ ಆತ್ಮೀಯತೆಯ ಕಾರಣ ಆತ್ಮರನ್ನು ತನ್ನಕಡೆ ಸೆಳೆಯಲಿ.

ವಾಯುಮಂಡಲವನ್ನು ತಯಾರು ಮಾಡಲು ಮುಖ್ಯವಾದ ಯುಕ್ತಿ ಯಾವುದಾಗಿದೆ? ವಾಯುಮಂಡಲ ಹೇಗೆ ತಯಾರಾಗುತ್ತದೆ? ವೃತ್ತಿಯಿಂದ ವಾಯುಮಂಡಲವನ್ನು ತಯಾರು ಮಾಡಬೇಕಾಗಿದೆ. ಹೇಗೆ ಯಾರಲ್ಲಾದರೂ ಅನ್ಯರಪ್ರತಿ ವೃತ್ತಿಯಲ್ಲಿ ಯಾವುದೇ ಮಾತು ಬಂದುಬಿಟ್ಟರೆ ತಾವು ಏನು ಹೇಳುತ್ತೀರಿ? ವಾಯುಮಂಡಲದಲ್ಲಿ ನನ್ನ ಪ್ರತಿ ಇಂತಹ ಮಾತು ಇದೆ ಎಂದು ಹೇಳುತ್ತೀರಿ. ವಾಯುಮಂಡಲಕ್ಕೆ ತಳಪಾಯವು ವೃತ್ತಿಯಾಗಿದೆ ಅಂದಮೇಲೆ ಎಲ್ಲಿಯವರೆಗೆ ವೃತ್ತಿಗಳನ್ನು ಶಕ್ತಿಶಾಲಿ ಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ವಾಯುಮಂಡಲದಲ್ಲಿ ಆತ್ಮೀಯತೆ ಹಾಗೂ ಸೇವೆಯಲ್ಲಿ ವೃದ್ಧಿಯಾಗುವುದಿಲ್ಲ. ಒಂದುವೇಳೆ ಬೀಜ ಶಕ್ತಿಶಾಲಿಯಾಗಿದ್ದರೆ ವೃಕ್ಷವೂ ಶಕ್ತಿಶಾಲಿಯಾಗಿರುತ್ತದೆ ಅಂದಮೇಲೆ ವೃತ್ತಿಯು ಬೀಜವಾಗಿದೆ. ಇದರಿಂದಲೇ ತಮ್ಮ ಹಾಗೂ ಸರ್ವೀಸಿನ ವೃದ್ಧಿ ಮಾಡಬಲ್ಲಿರಿ. ವೃದ್ಧಿಗೆ ಆಧಾರ ವೃತ್ತಿಯಾಗಿದೆ ಮತ್ತು ವೃತ್ತಿಯಲ್ಲಿ ಯಾವುದನ್ನು ತುಂಬಿಸಬೇಕು ಅದರಿಂದ ವೃತ್ತಿಯೂ ಶಕ್ತಿಶಾಲಿಯಾಗ ಬೇಕು? ಅದು ಒಂದೇ ಮಾತಾಗಿದೆ- ವೃತ್ತಿಯಲ್ಲಿ ಪ್ರತಿಯೊಂದು ಆತ್ಮನಪ್ರತಿ ದಯೆ ಹಾಗೂ ಕಲ್ಯಾಣದ ವೃತ್ತಿಯಿರಲಿ ಆಗ ತಾನಾಗಿಯೇ ಆತ್ಮರಪ್ರತಿ ಈ ವೃತ್ತಿಯಿರುವ ಕಾರಣ ಆ ಆತ್ಮರಿಗೆ ತಮ್ಮ ದಯೆ ಹಾಗೂ ಕಲ್ಯಾಣದ ವೈಬ್ರೇಷನ್(ತರಂಗಗಳು) ತಲುಪುವುದು. ಉದಾಹರಣೆಗೆ ರೇಡಿಯೋ ಹೇಗೆ ಕೆಲಸ ಮಾಡುತ್ತದೆ? ವಾಯುಮಂಡಲದಲ್ಲಿ ಯಾವ ತರಂಗಗಳಿರುತ್ತದೆಯೋ ಅದನ್ನು ಕ್ಯಾಚ್ ಮಾಡುತ್ತದೆ. ವೈರ್‌ಲೆಸ್‌ನ ಮೂಲಕ ವೈಬ್ರೇಷನ್ ಕ್ಯಾಚ್ ಮಾಡುತ್ತದೆ ಅಂದಮೇಲೆ ವಿಜ್ಞಾನದ ಮೂಲಕ ಒಬ್ಬರು ಇನ್ನೊಬ್ಬರ ಶಬ್ಧವನ್ನು ಕ್ಯಾಚ್ ಮಾಡುತ್ತಾರೆ ಹಾಗೂ ಕೇಳಿಸಿಕೊಳ್ಳುತ್ತಾರೆ. ಅದು ವೈರ್‌ಲೆಸ್‌ನ ಮೂಲಕ ಕೆಲಸ ಮಾಡುತ್ತದೆ. ಹಾಗೆಯೇ ನಿಮ್ಮದು ಆತ್ಮಿಕ ಶಕ್ತಿಯ ಮೂಲಕ ಕೆಲಸ ಮಾಡುತ್ತದೆ. ಇಲ್ಲಿಯೂ ಒಂದುವೇಳೆ ವೃತ್ತಿಯು ಶಕ್ತಿಶಾಲಿಯಾಗಿದ್ದರೆ ವೃತ್ತಿಯ

ಮೂಲಕ ವೈಬ್ರೇಷನ್ ಆ ಆತ್ಮನಿಗೆ ಎಷ್ಟು ಸ್ಪಷ್ಟವಾಗಿ ಅನುಭವವಾಗುತ್ತದೆ ಎಂದರೆ ರೇಡಿಯೋನ ಸ್ವಿಚ್ ಮಾಡುತ್ತಿದ್ದಂತೆ ಶಬ್ದವು ಸ್ಪಷ್ಟವಾಗಿ ಕೇಳಿಬರುವಂತೆ. ಇತ್ತೀಚೆಗೆ ದೂರದರ್ಶನದ ಮೂಲಕ ಅವರ ಚಟುವಟಿಕೆ ಹಾಗೂ ಮಾತುಗಳನ್ನು ಸಷ್ಟವಾಗಿ ತಿಳಿದುಕೊಳ್ಳಬಹುದು ಹಾಗೆಯೇ ಈಗ ವೃತ್ತಿಗಳ ಮೂಲಕ ಬಹಳ ಸರ್ವೀಸ್ ಮಾಡಬಲ್ಲಿರಿ. ಹೇಗೆ ಟಿ.ವಿ., ಹಾಗೂ ರೇಡಿಯೋ ಸ್ಟೇಷನ್ ಒಂದೇ ಸ್ಥಾನದಲ್ಲಿದ್ದರೂ ಸಹ ಅದು ಎಲ್ಲೆಲ್ಲಿಗೆ ತಲುಪುತ್ತದೆ. ಹಾಗೆಯೇ ವೃತ್ತಿಯಲ್ಲಿ ಇಷ್ಟು ಶಕ್ತಿಯಿರಬೇಕು ಎಲ್ಲಿಯೇ ಕುಳಿತಿದ್ದರೂ ಎಷ್ಟು ಶಕ್ತಿಶಾಲಿ ಸ್ಥಿತಿಯೋ ಅಷ್ಟು ದೂರದವರೆಗೆ ತಲುಪಬೇಕು. ಯಾವ ಆತ್ಮನ ವೃತ್ತಿ ಎಷ್ಟು ಶಕ್ತಿಶಾಲಿಯಾಗಿರುವುದೋ ಅಷ್ಟು ಒಂದುಸ್ಥಾನದಿಂದ ನಾಲ್ಕಾರು ಕಡೆ ವೃತ್ತಿಯ ಮೂಲಕ ಆತ್ಮರನ್ನು ಆಕರ್ಷಣೆ ಮಾಡುವರು. ಈಗ ಇಂತಹ ಸೇವೆ ಆಗಬೇಕಾಗಿದೆ. ವಾಣಿ ಹಾಗೂ ವೃತ್ತಿ, ಎರಡೂ ಒಟ್ಟೊಟ್ಟಿಗೆ ಕೆಲಸ ಮಾಡಲಿ. ಆದರೆ ಆಗುವುದೇನೆಂದರೆ ವೃತ್ತಿಯ ಮೂಲಕ ಸೇವೆ ಮಾಡುತ್ತೀರೆಂದರೆ ವಾಣಿ ನಡೆಯುತ್ತಿಲ್ಲ ಮತ್ತು ವಾಣಿಯ ಮೂಲಕ ಸೇವೆ ಮಾಡುತ್ತಿರೆಂದರೆ ವೃತ್ತಿಯ ಶಕ್ತಿಯು ಕಡಿಮೆಯಾಗುತ್ತಿದೆ. ಆದರೆ ಈಗ ಹೇಗಿರಬೇಕು? ಹೇಗೆ ಹೀಗಿನ ಸಿನಿಮಾ ಅಥವಾ ಟಿ.ವಿ.ಯಲ್ಲಿ ಶಬ್ದ ಮತ್ತು ಚಿತ್ರ ಎರಡೂ ಒಟ್ಟೊಟ್ಟಿಗೆ ನಡೆಯುತ್ತದೆ. ಎರಡೂ ಕಾರ್ಯಗಳು ಜೊತೆಜೊತೆಯಲ್ಲಿ ನಡೆಯುತ್ತದೆಯಲ್ಲವೆ. ಹಾಗೆಯೇ ಇದರಲ್ಲಿಯೂ ಅಭ್ಯಾಸವಾಗಲಿ - ವೃತ್ತಿ ಮತ್ತು ವಾಣಿ ಎರಡರಿಂದ ಒಟ್ಟೊಟ್ಟಿಗೆ ಸೇವೆಯಾಗಬೇಕು. ಹೆಚ್ಚು ವಾಣಿಯಲ್ಲಿ ಬರುವಕಾರಣ ವೃತ್ತಿಯ ಮೂಲಕ ಎಷ್ಟು ವಾಯುಮಂಡಲವನ್ನು ಶಕ್ತಿಶಾಲಿಯನ್ನಾಗಿ ಮಾಡಬೇಕೋ ಅಷ್ಟು ಮಾಡಲಾಗುವುದಿಲ್ಲ. ಕೇವಲ ವಾಣಿಯಿರುವ ಕಾರಣ ಅದರ ಶಕ್ತಿಯು ಎಷ್ಟು ಸಮಯ ಸನ್ಮುಖ ಹಾಗೂ ಸಮೀಪ ಇರುವರೋ ಅಲ್ಲಿಯವರೆಗೆ ಮಾತ್ರ ನಡೆಯುತ್ತದೆ. ವೃತ್ತಿಯು ವಾಣಿಗಿಂತಲೂ ಸೂಕ್ಷ್ಮ ವಾಗಿದೆಯಲ್ಲವೆ ಆದ್ದರಿಂದ ಸೂಕ್ಷ್ಮದ ಪ್ರಭಾವ ಹೆಚ್ಚಾಗಿರುವುದು. ಸ್ಥೂಲದ ಪ್ರಭಾವ ಕಡಿಮೆಯಿರುವುದು. ಆದ್ದರಿಂದ ಸೂಕ್ಷ್ಮ ಶಕ್ತಿಯೂ ಇರಲಿ ಮತ್ತು ಸ್ಥೂಲವೂ ಇರಲಿ. ಎರಡೂ ಶಕ್ತಿಗಳಿಂದ ವೃತ್ತಿಯು ತುಂಬಿರಲಿ. ಇಂತಹ ಅದ್ಭುತವು ಈಗ ಕಾಣಿಸಲಿ.

ಈಗಿನ್ನೂ ಮಹಾನ್ ಅಂತರ ಕಾಣಿಸುತ್ತಿಲ್ಲ. ಒಂದೇ ಸ್ಟೇಜಿನಮೇಲೆ ಎರಡೂ ಪ್ರಕಾರದ ಆತ್ಮರು ವಿರಾಜಮಾನರಾಗಲಿ ಆಗ ಜನತೆಗೆ ಮಹಾನ್ ಅಂತರ ಕಂಡುಬರುವುದು. ಸಾಕ್ಷಿಯಾಗಿ ನೋಡಿಕೊಳ್ಳಿರಿ, ಮಹಾನ್ ಅಂತರ ಕಾಣಿಸುತ್ತಿದೆಯೇ? ಹೇಗೆ ಯಾವುದಾದರೂ ಬಹಳ ಶಕ್ತಿಶಾಲಿ ವಸ್ತುವಿದ್ದರೆ ಅದರಮೇಲೆ ಅನ್ಯವಸ್ತುಗಳ ಪ್ರಭಾವ ಬೀರುವುದಿಲ್ಲ. ಇಲ್ಲಿಯೂ ಸಹ ಒಂದುವೇಳೆ ಸ್ಥೂಲ ಸ್ಟೇಜಿನ ಮೇಲೆ ತಮ್ಮ ಸೂಕ್ಷ್ಮ ಪವರ್ ಫುಲ್ ಸ್ಟೇಜ್ ಇದ್ದರೆ ಅನ್ಯರು ಭಲೆ ಎಷ್ಟಾದರೂ ಶಕ್ತಿಶಾಲಿಯಾಗಿ ಮಾತನಾಡಲಿ ಆದರೆ ವಾಯುಮಂಡಲದಲ್ಲಿ ಅದರ ಪ್ರಭಾವ ಬೀರುವುದಿಲ್ಲ. ಹೇಗೆ ನೆನಪಾರ್ಥವಾಗಿ ತೋರಿಸುತ್ತಾರೆ- ಸ್ಥೂಲ ಯುದ್ಧದಲ್ಲಿ ಒಂದುಕಡೆಯಿಂದ ಬಾಣವು ಬಂದಿತು, ಅದನ್ನು ಇನ್ನೊಂದು ಕಡೆಯಿಂದ ಮಧ್ಯದಲ್ಲಿಯೇ ಕತ್ತರಿಸಿಬಿಟ್ಟರು. ಹಾಗೆಯೇ ಬಾಣಬಂದಂತೆ ಅಲ್ಲಿಯೇ ಸಮಾಪ್ತಿ ಮಾಡಿಬಿಡುವರು. ಹಾಗೆಯೇ ವೃತ್ತಿಯಿಂದಲೇ ವಾಯುಮಂಡಲವನ್ನು ಶಕ್ತಿಶಾಲಿ ಮಾಡಬಲ್ಲಿರಿ. ಈಗ ಕೆಲವೊಂದೆಡೆ ತಮ್ಮ ಸ್ಥಿತಿಯ ಕೊರತೆಯಕಾರಣ ತಮ್ಮ ಸ್ಟೇಜಿನ ಮೇಲೆ ಅನ್ಯ ಆತ್ಮರ ಪ್ರಭಾವವು ವಾಯುಮಂಡದಲ್ಲಿ ಬೀರುತ್ತದೆ ಏಕೆ? ಕಾರಣವೇನು? ಕಾರಣವೇನೆಂದರೆ ವೃತ್ತಿಯ ಮೂಲಕ ಆತ್ಮರಿಗೆ ಆತ್ಮೀಯತೆಯ ಮುತ್ತಿಗೆ ಹಾಕುವುದಿಲ್ಲ. ಹೇಗೆ ಯಾರನ್ನಾದರೂ ಹಿಡಿಯಬೇಕೆಂದರೆ ಅವರು ಹೊರಗಡೆ ಬಾರದಂತೆ ಮುತ್ತಿಗೆ ಹಾಕುತ್ತಾರೆ. ವೃತ್ತಿಯ ಮೂಲಕ ಆತ್ಮೀಯತೆಯ ಮುತ್ತಿಗೆ ವಾಯುಮಂಡಲದಲ್ಲಿ ಹಾಕಿದಾಗ ಯಾವುದೇ ಆತ್ಮ ಈ ಆತ್ಮಿಕ ಆಕರ್ಷಣೆಯಿಂದ ಹೊರಗಡೆ ಬರಲು ಸಾಧ್ಯವಾಗುವುದಿಲ್ಲ. ಈಗ ಇಂತಹ ಸೇವೆಯಾಗಬೇಕು ಏಕೆಂದರೆ ಅವರಿನ್ನೂ ಚಮತ್ಕಾರ ನೋಡುವುದಕ್ಕಾಗಿಯೇ ಕಾಯುತ್ತಿದ್ದಾರೆ. ಆದ್ದರಿಂದ ಇವರೇನಾದರೂ ಚಮತ್ಕಾರ ತೋರಿಸಲಿ ಎಂದು ಆಲೋಚಿಸುತ್ತಾರೆ ಆದರೆ ಇಲ್ಲಿ ಚಮತ್ಕಾರದ ಬದಲು ಅದ್ಭುತವನ್ನು ತೋರಿಸಿ, ಅವರದು ರಿದ್ಧಿಸಿದ್ಧಿಯ ಮೂಲಕ ಚಮತ್ಕಾರವಾಗಿದೆ, ತಮ್ಮದು ವೃತ್ತಿಯ ಮೂಲಕ ಚಮತ್ಕಾರವಾಗಿದೆ. ಈಗ ಯಾವುದಾದರೂ ಇಂತಹ ಚಮತ್ಕಾರವನ್ನು ತೋರಿಸಿ ಅವರಿಗೆ ಅವಶ್ಯವಾಗಿ ವಿಶೇಷತೆಯ ಅನುಭವವಾಗಬೇಕು ಆದರೆ ಆಗುವುದೇನೆಂದರೆ ಆತ್ಮರ ಮೇಲೆ ಅಲ್ಪಕಾಲದ ಪ್ರಭಾವ ಕೆಲವೊಂದೆಡೆ ಪರಿಣಾಮ ಬೀರುತ್ತದೆ. ನೀವು ಹೇಗೆ ಮಾಡುತ್ತಿದ್ದೀರಿ. ಹೇಗೆ ಮಾತನಾಡುತ್ತಿದ್ದೀರಿ ಎಂದು ಅವರು ಗಮನಿಸುತ್ತಿದ್ದಾರೆ. ಮತ್ತು ಪರಿಶೀಲಿಸುತ್ತಿದ್ದಾರೆ. ಆದ್ದರಿಂದ ತಮ್ಮ ಅಥಾರಿಟಿಯ ಫೋರ್ಸ್ ನೋಡಿ ಅವರ ದೃಷ್ಟಿ ಬಲಹೀನವಾಗುತ್ತಿದೆ. ವೃತ್ತಿ, ದೃಷ್ಟಿ, ಮಾತಿನಲ್ಲಿ ಒಂದು ತಂದೆಯ

ಹೊರತು ಮತ್ಯಾರು ಇರಬಾರದು. ಇದೇ ನಿಮ್ಮ ಪ್ರತಿಜ್ಞೆ ತಾನೇ? ಆತ್ಮರ ಪ್ರಭಾವವನ್ನು ಬುದ್ಧಿಯಲ್ಲಿಟ್ಟುಕೊಳ್ಳುತ್ತಾ, ಆತ್ಮರ ಪ್ರಭಾವವನ್ನು ನೋಡುತ್ತಾ ತಾವು ಮಾತನಾಡುವುದೂ ಸಹ ಸೂಕ್ಷ್ಮದಲ್ಲಿ ತಂದೆಯೊಂದಿಗೆ ಸಂಬಂಧ ಕತ್ತರಿಸಿದಂತೆ. ಹೇಗೆ ಯಜ್ಞದ ಆರಂಭದಲ್ಲಿ ತಮ್ಮ ನಶೆಯಲ್ಲಿಯೇ ತಾವು ಮಸ್ತರಾಗಿದ್ದಿರಿ. ತಮ್ಮ ಜ್ಞಾನದ ಶಕ್ತಿಯನ್ನು ಪ್ರತ್ಯಕ್ಷ ಮಾಡುವುದರಲ್ಲಿ ಸಮರ್ಥರಾಗಿದ್ದಿರಿ. ಆ ಸಾಮರ್ಥ್ಯದ ಕಾರಣ ಮೊದಲ ರಚನೆಯೂ ಸಹ ಸಮರ್ಥರಾದ ಆತ್ಮರೇ ಬಂದರು. ಅಂದಮೇಲೆ ಈಗಿನ ರಚನೆಯು ಮೊದಲ ರಚನೆಯ ತರಹ ಸಮರ್ಥವಾಗಿದೆಯೇ? ಭಲೆ ಎಷ್ಟೇ ಉಮ್ಮಂಗದಿಂದ ಬರಲಿ, ಮೊದಲ ಆತ್ಮರಂತೆ ಸಮರ್ಥರಾಗಿಲ್ಲ. ದಿನ- ಪ್ರತಿದಿನ ತಾವು ಜ್ಞಾನದ ಅನುಭವಿಗಳಂತೂ ಆಗುತ್ತಿದ್ದೀರಿ. ಆದರೆ ಮೊದಲಿನ ಪವರ್‌ಫುಲ್ ಸ್ಥಿತಿಯು ಇದೆಯೇ? ಆ ನಿರ್ಭಯತೆಯಿದೆಯೇ? ಮೊದಲಿನ ಆ ಅಥಾರಿಟಿಯ ಮಾತು ಈಗ ಇದೆಯೇ?

ಹೇಗೆ ಕೆಲವೊಮ್ಮೆ ಯಾವುದೇ ಪದಾರ್ಥವನ್ನು ಹೆಚ್ಚು ರಿಫೈನ್ ಮಾಡಿದಾಗ ರಿಫೈನಂತೂ ಆಗುತ್ತದೆ ಆದರೆ ಪವರ್‌ಲೆಸ್ ಆಗಿಬಿಡುತ್ತದೆ ಅರ್ಥಾತ್ ಶಕ್ತಿ ಕಳೆದುಕೊಳ್ಳುತ್ತದೆ. ಈಗಿನ ಪದಾರ್ಥಗಳು ರಿಫೈನ್ ಆಗಿದ್ದರೂ ಅದರಲ್ಲಿ ಫೋರ್ಸ್ ಇದೆಯೇ? ಹಾಗೆಯೇ ಇಲ್ಲಿಯೂ ಸಹ ಜ್ಞಾನದ ರೂಪ ರಿಫೈನ್ ಆಗಿಬಿಟ್ಟಿದೆ. ಯುಕ್ತಿಗಳೂ ರಿಫೈನ್ ಆಗಿಬಿಟ್ಟಿದೆ ಆದರೆ ಫೋರ್ಸ್ ಕಡಿಮೆಯಿದೆ. ಮೊದಲಿನ ಮಾತುಗಳನ್ನು ಒಂದುವೇಳೆ ಸ್ಮೃತಿಗೆ ತಂದುಕೊಂಡರೆ ಆಗ ಎಷ್ಟು ನಶೆಯಿತ್ತು, ಜ್ಞಾನದ ಆಕರ್ಷಣೆಯಿರಲಿಲ್ಲ. ಆದರೆ ಮಸ್ತಕ ಹಾಗೂ ನಯನಗಳಲ್ಲಿ ಆಕರ್ಷಣೆಯಿತ್ತು. ನಯನಗಳಿಂದ ಎಲ್ಲರೂ ಅನುಭವ ಮಾಡುತ್ತಿದ್ದರು- ಇವರು ಭಗವಂತನ ಕಡೆಯವರು ಬಂದಿದ್ದಾರೆ ಎಂದು. ಈಗ ಮಿಕ್ಸ ಆಗಿರುವಕಾರಣ ಮಿಕ್ಸ್ ಆಗಿ ಕಾಣುತ್ತೀರಿ. ಬಹಳ ಮಿಕ್ಸ್ ಆಗಿರುವ ಪದಾರ್ಥವು ಅಲ್ಪಕಾಲಕ್ಕಾಗಿ ಬಹಳ ರುಚಿಕೊಡುತ್ತದೆ ಆದರೆ ಅದರಲ್ಲಿ ಶಕ್ತಿಯಿರುವುದಿಲ್ಲ. ಹೇಗೆ ಚಟ್ನಿಯು ಎಷ್ಟು ರುಚಿಕರವಾಗಿರುತ್ತದೆ ಆದರೆ ಅದರಲ್ಲಿ ಶಕ್ತಿಯಿದೆಯೇ? ಕೇವಲ ಅಲ್ಪಕಾಲಕ್ಕಾಗಿ ನಾಲಿಗೆರಸ ಆಕರ್ಷ ಮಾಡುತ್ತದೆ. ಹಾಗೆಯೇ ಇಲ್ಲಿಯೂ ಬಹಳ ಮಿಕ್ಸ್ ಮಾಡುವುದರಿಂದ ಅಲ್ಪಕಾಲಕ್ಕಾಗಿ ಬಹಳ ಚೆನ್ನಾಗಿದೆ ಎನಿಸುತ್ತದೆ ಆದರೆ ಶಕ್ತಿಯಿರುವುದಿಲ್ಲ. ಹೇಗೆ ತಾಕತ್ತಿನ ಪದಾರ್ಥವು ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ಶಕ್ತಿಯು ಸದಾಕಾಲದ ಜೊತೆಗಾರನಾಗಿಬಿಡುತ್ತದೆ ಹಾಗೆಯೇ ಯಾವ ಅಥಾರಿಟಿ ಮತ್ತು ಸತ್ಯವಾದ ಮಾತುಗಳಿವೆಯೋ ಅವು ಸದಾಕಾಲಕ್ಕಾಗಿ ಶಕ್ತಿವಂತರನ್ನಾಗಿ ಮಾಡಿಬಿಡುತ್ತವೆ ಮತ್ತು ಯಾವುದು ರಮಣೀಕ ಹಾಗೂ ಮಿಕ್ಸ್‌ರೂಪದ ಮಾತುಗಳಿವೆಯೋ ಅವು ಅಲ್ಪಕಾಲಕ್ಕಾಗಿ ರುಚಿಯಲ್ಲಿ ತರುತ್ತವೆ. ಆತ್ಮರನ್ನು ರುಚಿಯಲ್ಲಿ ತರಬೇಕೋ ಅಥವಾ ಶಕ್ತಿ ತುಂಬಿಸಬೇಕೋ? ಏನು ಮಾಡಬೇಕು? ಶಕ್ತಿಯು ಆತ್ಮರನ್ನು ಸದಾಕಾಲಕ್ಕಾಗಿ ಆಕರ್ಷಣೆ ಮಾಡುತ್ತಾ ಇರುವುದು ಆದರೆ ರುಚಿಯು ಈಗ ಇರುತ್ತದೆ ನಂತರ ಯಾವುದೇ ಮಾತನ್ನು ಕೇಳಿದಾಗ ಅದರಕಡೆ ರುಚಿಹೋಗುವ ಕಾರಣ ಅಲ್ಲಿಗೇ ಸಮಾಪ್ತಿಯಾಗುತ್ತದೆ. ಆದ್ದರಿಂದ ಈಗ ಇಂತಹ ನಶೆಯುಳ್ಳ ಯೋಗಿಗಳಾಗಿ, ಹೇಗೆ ಯಾರಾದರೂ ದೊಡ್ಡ-ದೊಡ್ಡ ಮಹಾರಥಿಗಳಿದ್ದರೆ ಅವರು ಬಹಳಸಮಯ ಗುಹೆಯಲ್ಲಿದ್ದು ನಂತರ ಸೇವೆಗಾಗಿ ಸೃಷ್ಟಿಯಲ್ಲಿ ಬರುತ್ತಾರೆ ಹಾಗೆಯೇ ಯಾವಾಗ ತಾವು ಸ್ಟೇಜಿನ ಮೇಲೆ ಬರುತ್ತೀರೋ ಆಗ ಈ ಅನುಭವವಾಗಬೇಕು- ಈ ಆತ್ಮರು ಬಹಳ ಸಮಯದ ಅಂತರ್ಮುಖತೆ, ಆತ್ಮೀಯತೆಯ ಗುಹೆಯಿಂದ ಸೇವೆಗಾಗಿ ಹೊರ ಬಂದಿದ್ದಾರೆ. ಹೀಗೆ ತಪಸ್ವೀರೂಪ ಕಾಣಿಸಲಿ, ಬೇಹದ್ದಿನ ವೈರಾಗ್ಯದ ರೇಖೆಗಳು ಚಹರೆಯಿಂದ ಕಂಡುಬರಲಿ. ಯಾರಾದರೂ ಸ್ವಲ್ಪ ವೈರಾಗಿಯಾದರೂ ಅವರ ಚಹರೆಯು ಇವರು ವೈರಾಗಿ ಆಗಿದ್ದಾರೆ ಎಂದು ಸಿದ್ಧ ಮಾಡುತ್ತದೆ. ಹಾಗೆಯೇ ಈಗ ಬೇಹದ್ದಿನ ವೈರಾಗ್ಯವೃತ್ತಿ ಕಂಡುಬರಲಿ, ಯಾವಾಗ ಸ್ಟೇಜಿನ ಮೇಲೆ ಸೇವೆಗಾಗಿ ಬರುತ್ತೀರೋ ಆಗ ತಮ್ಮ ಚಹರೆಯಿಂದ ಈ ರೀತಿ ಅನುಭವವಾಗಲಿ- ಹೇಗೆ ಪ್ರೊಜೆಕ್ಟರ್ ಯಂತ್ರದಲ್ಲಿ ಸ್ಲೈಡ್‌ಗಳು ಬದಲಾಗುವಂತೆ. ಎಷ್ಟು ಗಮನವಿಟ್ಟುಹೋಗುತ್ತಾರೆ. ಆ ದೃಶ್ಯವು ಸ್ಪಷ್ಟವಾಗಿ ಕಾಣಿಸುತ್ತದೆ ಹಾಗೆಯೇ ಯಾವಾಗ ಸೇವಾಸ್ಟೇಜಿನ ಮೇಲೆ ಬರುತ್ತೀರೋ ಆಗ ಒಬ್ಬೊಬ್ಬರ ಚಹರೆಯು ಪ್ರೊಜೆಕ್ಟರ್ ಶೋನ ಯಂತ್ರದಂತೆ ಕಾಣಿಸಲಿ. ಚಹರೆಯಿಂದ ದಯಾಹೃದಯದ ಗುಣವು ಕಾಣಿಸಲಿ. ಬೇಹದ್ದಿನ ವೈರಾಗಿಯಾಗಿದ್ದರೆ ಬೇಹದ್ದಿನ ವೈರಾಗ್ಯದ ರೇಖೆಗಳು ಚಹರೆಯಿಂದ ಕಾಣಿಸಲಿ. ಆಲ್‌ಮೈಟಿ ಅಥಾರಿಟಿ ತಂದೆಯ ಮೂಲಕ ನಿಮಿತ್ತರಾಗಿದ್ದೀರಿ ಅಂದಮೇಲೆ ಅಥಾರಿಟಿಯ ರೂಪ ಕಂಡುಬರಬೇಕು. ಹೇಗೆ ಆ ಯಂತ್ರದಲ್ಲಿಯೂ ಸ್ಲೈಡ್ ತುಂಬಿಸುತ್ತಾರೆಂದರೆ ಒಂದೊಂದು ಸ್ಪಷ್ಟವಾಗಿ ಕಾಣಿಸುತ್ತದೆ ಅದೇರೀತಿ ಆತ್ಮದಲ್ಲಿ ಸರ್ವಗುಣ, ಸರ್ವಶಕ್ತಿಗಳಿಂದ ತುಂಬಿರುವ ಸಂಸ್ಕಾರವು ಒಂದೊಂದಾಗಿ

ಚಹರೆಯಿಂದ ಸ್ಪಷ್ಟವಾಗಿ ಕಾಣಲಿ. ಇದನ್ನು ಸೇವೆ ಎಂದು ಹೇಳಲಾಗುತ್ತದೆ. ಹೇಗೆ ಸಾಕಾರ ಬ್ರಹ್ಮಾತಂದೆಯನ್ನು ಉದಾಹರಣೆಯಾಗಿ ನೋಡಿದಿರಿ, ಚಹರೆಯಿಂದ ಪ್ರತಿಯೊಂದು ಗುಣದ ಪ್ರತ್ಯಕ್ಷ ಸಾಕ್ಷಾತ್ಕಾರ ಮಾಡಿಸಿದರು. ಅದೇರೀತಿ ತಂದೆಯನ್ನು ಫಾಲೋ ಮಾಡಿ. ಎಂತಹದ್ದೇ ಅಥಾರಿಟಿಯುಳ್ಳವರೇ ಬರಲಿ, ಎಂತಹ ಮನೋಸ್ಥಿತಿಯುಳ್ಳವರೇ ಬರಲಿ ಆದರೆ ಗುಣಗಳ ವ್ಯಕ್ತಿತ್ವ, ಆತ್ಮೀಯತೆಯ ವ್ಯಕ್ತಿತ್ವ, ಸರ್ವಶಕ್ತಿಗಳ ವ್ಯಕ್ತಿತ್ವದ ಮುಂದೆ ಏನು ಮಾಡುವರು? ತಲೆಬಾಗುವರು. ತಮ್ಮ ಪ್ರಭಾವ ಬೀರಲು ಸಾಧ್ಯವಾಗುವುದಿಲ್ಲ. ಹೀಗೆ ವೃತ್ತಿಯ ಮೂಲಕ ವಾಯುಮಂಡಲವನ್ನು ಶಕ್ತಿಶಾಲಿಯಾಗಿ ಮಾಡುವಕಾರಣ ಅವರ ವೃತ್ತಿ ಮತ್ತು ಅವರ ಒಳಗಿನ ವೈಬ್ರೇಷನ್ ಬದಲಾಗುತ್ತದೆ. ಎಲ್ಲರ ಬಾಯಿಂದ ಬ್ರಹ್ಮಾತಂದೆಯ ವೃತ್ತಿಯ ಪವರ್‌ನ ವರ್ಣನೆ ಮಾಡುತ್ತಿದ್ದರಲ್ಲವೆ. ವೃತ್ತಿ ಹಾಗೂ ವಾಣಿಯ ಅಥಾರಿಟಿಯ ಪ್ರತ್ಯಕ್ಷಪ್ರಮಾಣವನ್ನು ನೋಡಿದಿರಿ, ಅಂದಮೇಲೆ ಈಗ ಫಾಲೋ ಮಾಡಬೇಕಲ್ಲವೆ. ಸ್ನೇಹರೂಪದಲ್ಲಂತೂ ಪಾಸ್ ಆಗಿಬಿಟ್ಟಿದ್ದೀರಿ. ಈಗ ಯಾವುದರಲ್ಲಿ ಪಾಸ್ ಆಗಬೇಕು? ಏಕೆಂದರೆ ಅಂತಿಮ ಸ್ವರೂಪವೇ ಶಕ್ತಿಯದ್ದಾಗಿದೆ. ಯಾವುದೇ ಆತ್ಮ ತಮ್ಮಬಳಿ ಬಂದರೆ ಮೊದಲು ಜಗನ್ಮಾತೆಯ ಸ್ನೇಹರೂಪವನ್ನು ಧಾರಣೆ ಮಾಡಿಕೊಳ್ಳುತ್ತೀರಿ. ಆದರೆ ಅವರು ನಡೆಯಲಾರಂಭಿಸಿದಾಗ ಮತ್ತು ಮಾಯೆಯನ್ನುಎದುರಿಸಬೇಕಾದಾಗ ಎದುರಿಸುವುದರಲ್ಲಿ ಸಹಯೋಗಿಯಾಗುವ ಬದಲು ಶಕ್ತಿರೂಪ ಧಾರಣೆ ಮಾಡಿಕೊಳ್ಳಬೇಕಾಗುವುದು.

ಕೆಲವೊಂದುಕಡೆ ನೋಡಿದಾಗ ನಿಮಿತ್ತರಾಗಿರುವ ಆತ್ಮರು ಕೇವಲ ಸ್ನೇಹಮೂರ್ತಿಗಳಾಗಿರುವ ಕಾರಣ ಅವರ ರಚನೆಯಲ್ಲಿಯೂ ಸಮಸ್ಯೆಗಳನ್ನು ಎದುರಿಸುವ ಶಕ್ತಿಯು ಕಡಿಮೆಯಿರುವುದು. ಯಜ್ಞ ಹಾಗೂ ದೈವೀಪರಿವಾರದ ಸ್ನೇಹಿ-ಸಹಯೋಗಿ ಆಗಿರುವರು ಆದರೆ ಎದುರಿಸಲು ಅವರಿಂದಾಗುವುದಿಲ್ಲ. ಕಾರಣವೇನು? ರಚಯಿತನ ಪ್ರಭಾವ ರಚನೆಯ ಮೇಲೆ ಬೀಳುತ್ತದೆ. ಈಗ ಯಾರೆಲ್ಲಾ ಆತ್ಮರು ಮುಂದುವರೆಯುತ್ತಾ-ಮುಂದುವರೆಯುತ್ತಾ ಈಗ ಎಲ್ಲಿಯವರೆಗೆ ತಲುಪಿದ್ದಾರೆ. ಅಲ್ಲಿಂದ ಮುಂದುವರೆಸುವುದಕ್ಕಾಗಿ ವಿಶೇಷ ಆತ್ಮರು ವಿಶೇಷವಾಗಿ ಏನು ಮಾಡುತ್ತಾರೆ? ಯಾವ ಆತ್ಮರಿಗೆ ನಿಮಿತ್ತರಾಗಿದ್ದೀರೋ ಆ ಆತ್ಮರಲ್ಲಿಯೂ ಶಕ್ತಿರೂಪದಿಂದ ಶಕ್ತಿತುಂಬಿಸುವ ಅವಶ್ಯಕತೆಯಿದೆ. ವರ್ತಮಾನ ಸಮಯದ ಮೆಜಾರಿಟಿ ಆತ್ಮರ ಫಲಿತಾಂಶವೇನು ಕಾಣುತ್ತದೆ? ಹಿಂದೆ ಸರಿಯುವುದೂ ಇಲ್ಲ, ಮುಂದೆ ಹೋಗುವುದೂ ಇಲ್ಲ. ಏಕೆಂದರೆ ಶಕ್ತಿಯಿಲ್ಲದಕಾರಣ ಅವರು ಹೈಜಂಪ್ ಮಾಡುವುದಿಲ್ಲ. ಈಗ ಎಕ್ಸ್‌ಟ್ರಾ ಫೋರ್ಸ್ ಬೇಕಾಗಿದೆ. ಹೇಗೆ ರಾಕೇಟ್‌ನಲ್ಲಿ ಫೋರ್ಸ್ ತುಂಬಿಸಿ, ಅಷ್ಟು ಮೇಲೆ ಕಳುಹಿಸುತ್ತಾರಲ್ಲವೆ. ಹಾಗೆಯೇ ಈಗ ಆತ್ಮರಿಗೆ ಪಾಲನೆ ಬೇಕಾಗಿದೆ. ತಮ್ಮ ಯಥಾಶಕ್ತಿಯಿಂದ ಜಂಪ್ ಮಾಡಲು ಆಗುತ್ತಿಲ್ಲ. ವಿಶೇಷ ಆತ್ಮರು ವಿಶೇಷ ಶಕ್ತಿಯನ್ನು ತುಂಬಿಸಿ ಅವರಿಂದ ಜಂಪ್ ಮಾಡಿಸಬೇಕಾಗಿದೆ. ಎಲ್ಲರೂ ಇಚ್ಛಿಸುತ್ತಾರೆ, ಪುರುಷಾರ್ಥವೂ ಮಾಡುತ್ತಾರೆ ಆದರೆ ಈಗ ಫೋರ್ಸ್ ಬೇಕಾಗಿದೆ. ಆ ಫೋರ್ಸ್ ಹೇಗೆ ಕೊಡುತ್ತೀರಿ? ಮೊದಲು ತಮ್ಮಲ್ಲಿ ಫೋರ್ಸ್ ಇರಬೇಕು, ತಮ್ಮನ್ನೂ ಮುಂದುವರೆಸಿಕೊಳ್ಳಬೇಕು ಆದರೆ ಶಕ್ತಿಯ ದಾನವನ್ನೂ ಮಾಡುವಂತಿರಬೇಕು. ಹೇಗೆ ಜ್ಞಾನದಾನ ಮಾಡುತ್ತೀರಿ ಹಾಗೆಯೇ ಈಗ ಶಕ್ತಿಯ ಬಲ ಬೇಕಾಗಿದೆ. ಈಗ ವರದಾತಾತನದ ಕರ್ತವ್ಯ ಮಾಡಬೇಕು. ಜ್ಞಾನದಾತರಾಗಿ ಬಹಳ ಮಾಡಿದಿರಿ, ಈಗ ಶಕ್ತಿಗಳ ವರದಾತರಾಗಬೇಕು. ಆದ್ದರಿಂದ ಶಕ್ತಿಯರ ಮುಂದೆ ಸದಾ ವರವನ್ನು ಬೇಡುತ್ತಾರೆ. ಶಕ್ತಿಯರ ಮೂಲಕ ಸಿದ್ಧಿ ಹೇಗೆ ಸಿಗುವುದು? ಈಗ ಯಾವ ಸೇವೆ ಮಾಡಬೇಕಾಗಿದೆ? ವರದಾನಿಯಾಗಿ ಸರ್ವಶಕ್ತಿಗಳಿಂದ ತಮ್ಮ ನಿಮಿತ್ತವಾಗಿರುವ ರಚನೆಗೆ ವರದಾನ ಕೊಡಬೇಕಾಗಿದೆ. ಯಾವ ವಿಶೇಷ ಆತ್ಮರು ನಿಮಿತ್ತರಾಗಿದ್ದೀರೋ ಅವರೇ ಈ ಸೇವೆಯನ್ನು ಹೆಚ್ಚು ಮಾಡಲು ಸಾಧ್ಯ. ಇದು ವಿಶೇಷ ಆತ್ಮರ ಗ್ರೂಪ್ ಆಗಿದೆಯಲ್ಲವೆ. ಹೇಗೆ ಮೊದಲೇ ತಿಳಿಸಿದೆವು, ಮೈಕ್ ಆಗುವುದು ಬಹಳ ಸಹಜ ಆದರೆ ತಮ್ಮೆಲ್ಲರ ಸೇವೆಯಿಂದ ಮೈಕ್ ಆತ್ಮರು ಬಹಳ ತಯಾರಾಗುತ್ತಾರೆ. ಆದರೆ ಮೈಟ್ ತುಂಬುವವರು ತಾವಾಗಿದ್ದೀರಿ. ಈಗ ಇದರ ಅವಶ್ಯಕತೆಯಿದೆ. ಈಗ ತಮ್ಮದೇ ಪುರುಷಾರ್ಥದಲ್ಲಿರುವ ಸಮಯವಲ್ಲ. ತಮ್ಮ ಪುರುಷಾರ್ಥದ ಮೂಲಕ ಪ್ರತ್ಯಕ್ಷವಾಗಿ ಪ್ರಭಾವ ತರುವ ಸಮಯವಾಗಿದೆ ಮತ್ತು ಆ ಪ್ರಭಾವವೇ ಆತ್ಮರನ್ನು ತಾನಾಗಿಯೇ ಆಕರ್ಷಣೆ ಮಾಡುವುದು. ಒಳ್ಳೆಯದು-

ಪಾಂಡವರ ಗಾಯನವೇನಾಗಿದೆ? ಗುಪ್ತರಾಗಿದ್ದು ನಂತರ ಪ್ರತ್ಯಕ್ಷರಾದರಲ್ಲವೆ. ಈಗ ಪ್ರತ್ಯಕ್ಷರಾಗಬೇಕು. ಹೇಗೆ ಸ್ಥೂಲಸ್ಟೇಜಿನ ಮೇಲೆ ಪ್ರತ್ಯಕ್ಷವಾಗುತ್ತಾ ಹೋಗುತ್ತಿದ್ದೀರಿ. ಈಗ ತಮ್ಮ ಸೂಕ್ಷ್ಮ ಸ್ಟೇಜನ್ನು ಪ್ರತ್ಯಕ್ಷ ಮಾಡಿಕೊಳ್ಳಲು ಘರ್ಜಿಸುವವರ ರಚನೆ ಮಾಡಿ. ಒಂದುವೇಳೆ ಬಲಹೀನ ರಚನೆಯನ್ನು ರಚಿಸಿದರೆ ಅದನ್ನು ಸಂಭಾಲನೆ ಮಾಡುವುದರಲ್ಲಿಯೇ ಸಮಯ ಹಿಡಿಸುತ್ತದೆ. ಶಕ್ತಿಶಾಲಿ ರಚನೆ ರಚಿಸಿದಾಗ ಸಹಯೋಗಿ ಯಾಗುವರು. ಈಗ ಘರ್ಜಿಸಬೇಕಾಗಿದೆ. ದೇವಿಯರ ಸವಾಲು ಹಾಕುವ ಪೂಜೆಯೇ ನಡೆಯುತ್ತದೆ. ಈ ಶಕ್ತಿಯ ಚಿಹ್ನೆಯು ನೆನಪಾರ್ಥ ರೂಪದಲ್ಲಿದೆ. ಜೋರು-ಜೋರಾಗಿ ಕೂಗಾಡುತ್ತಾರೆ. ತಮ್ಮಲ್ಲಿನ ಫೋರ್ಸನ್ನು ಈ ರೀತಿ ಪ್ರಸಿದ್ಧ ಮಾಡುತ್ತಾರೆ. ದೇವಿಯರ ಪೂಜೆಯನ್ನು ಮೌನದಲ್ಲಿದ್ದು ಮಾಡುವುದಿಲ್ಲ, ಬಹಳ ಜೋರಾಗಿ ಮಾಡುತ್ತಾರೆ. ಅಂದಮೇಲೆ ತಮ್ಮ ಸಿದ್ಧಾಂತಗಳನ್ನು ಸಿದ್ಧ ಮಾಡುವುದರಲ್ಲಿ ಈಗ ಶಕ್ತಿಯರು ಘರ್ಜಿಸಬೇಕಾಗಿದೆ ಆಗಲೇ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುವಿರಿ. ಸಾಧಾರಣ ಆತ್ಮರೂ ಸಹ ನಿರ್ಭಯರಾಗಿ ತಮ್ಮ ಸಿದ್ಧಾಂತಗಳನ್ನು ಸಿದ್ಧ ಮಾಡುವ ಎಷ್ಟು ಪುರುಷಾರ್ಥ ಮಾಡುತ್ತಾರೆ ಅಂದಮೇಲೆ ತಮ್ಮೆಲ್ಲರಿಗೆ ಸಿದ್ಧಾಂತಗಳನ್ನು ಸಿದ್ಧ ಮಾಡುವ ಎಷ್ಟು ಹುರುಪಿರಬೇಕು! ತಾವು ವಾಯುಮಂಡಲದ ಹುರುಪಿನಲ್ಲಿ ಬಂದುಬಿಡುತ್ತೀರಿ. ಆದಿಯ ಪಾತ್ರವು ಪುನಃ ಅಂತ್ಯದಲ್ಲಿ ಗುಹ್ಯ ಹಾಗೂ ಗೋಪನೀಯ ರೂಪದಿಂದ ಪುನರಾವರ್ತಿಸಬೇಕಾಗಿದೆ. ಸ್ಥೂಲ ಕೈಚಳಕವನ್ನು ತೋರಿಸುವವರಿಗೆ ನೋಡಿ- ಎಷ್ಟು ನಶೆಯಿರುತ್ತದೆ. ಇದು ಅಲ್ಪಕಾಲದ್ದಾಗಿದೆ ಎಂದು ಒಳಗಡೆ ತಿಳಿದಿದ್ದರೂ ಸಹ ಎಷ್ಟು ನಶೆಯನ್ನಿಟ್ಟುಕೊಳ್ಳುತ್ತಾರೆ. ಆದರೆ ಸತ್ಯವಾದ ನಶೆಯಿರುವವರು ಎಷ್ಟು ಚಮತ್ಕಾರವನ್ನು ತೋರಿಸಬಲ್ಲಿರಿ? ನಿಮ್ಮಮುಂದೆ ಅವರ ನಶೆ ಎಷ್ಟು ಮಾತ್ರದ್ದು! ಈಗ ಲಾಸ್ಟ್ ಕೋರ್ಸ್ ಯಾವುದು ಉಳಿದುಕೊಂಡಿದೆ? ಫೋರ್ಸ್‌ರೂಪ ಆಗಬೇಕಾಗಿದೆ. ಬಹಳಷ್ಟು ಜಗನ್ಮಾತೆಯಾದಿರಿ, ಆದರೆ ಈಗ ಶಕ್ತಿರೂಪದಿಂದ ಸ್ಟೇಜಿನ ಮೇಲೆ ಬರಬೇಕಾಗಿದೆ. ಶಕ್ತಿಯರು ಆಸುರೀ ಸಂಸ್ಕಾರಗಳನ್ನು ಒಂದೇ ಏಟಿಗೆ ಸಮಾಪ್ತಿ ಮಾಡುತ್ತಾರೆ ಮತ್ತು ಸ್ನೇಹಿ ಮಾತೆ ಆಗಿರುವವರು ನಿಧಾನ, ನಿಧಾನವಾಗಿ ಪ್ರೀತಿಯಿಂದ ಪಾಲನೆ ಮಾಡುತ್ತಾರೆ. ಮೊದಲು ಅದರ ಅವಶ್ಯಕತೆಯಿತ್ತು, ಆದರೆ ಈಗಿನ ಅವಶ್ಯಕತೆಯೇನೆಂದರೆ ಶಕ್ತಿರೂಪರಾಗಿ ಅಸುರೀ ಸಂಸ್ಕಾರಗಳನ್ನು ಸಮಾಪ್ತಿ ಮಾಡುವುದು. ಹೇಗೆ ಅವರು ಬಲಿಕೊಡುವ ಮೊದಲು ಚೆನ್ನಾಗಿ ಶೃಂಗಾರ ಮಾಡುತ್ತಾರೆ ಅದರಲ್ಲಿ ಸಮಯ ಹಿಡಿಸುತ್ತದೆ ಆದರೆ ಬಲಿಯನ್ನು ಒಂದು ಸೆಕೆಂಡಿನಲ್ಲಿ ಕೊಡುತ್ತಾರೆ. ಬಹಳ ಶೃಂಗಾರ ಮಾಡಿದಿರಿ, ಆದರೆ ಈಗ ಒಂದೇ ಏಟಿಗೆ ವಾಯುಮಂಡಲದಿಂದಲೂ ಅಸುರೀ ಸಂಸ್ಕಾರಗಳನ್ನು ಸಮಾಪ್ತಿ ಮಾಡುವ ಫೋರ್ಸ್ ಇರಬೇಕು. ದಯಾಹೃದಯಿಯ ಜೊತೆಜೊತೆಗೆ ಶಕ್ತಿರೂಪದ ಆತ್ಮಿಕನಶೆಯೂ ಇರಬೇಕು. ಕೇವಲ ದಯಾಹೃದಯಿಯಲ್ಲ. ಎಷ್ಟು ನಶೆಯೋ ಅಷ್ಟೇ ದಯೆ ಇರಬೇಕು. ಶಬ್ದಗಳಲ್ಲಿಯೂ ದಯಾಹೃದಯಿ ಭಾವನೆಯಿರಲಿ, ಇದು ಇಂತಹ ಸೇವೆಯ ಸಮಯವಾಗಿದೆ. ದೃಷ್ಟಿಯಿಂದ ಪರಿವರ್ತನೆಯಾಗುವ ಗಾಯನವು ಯಾರ ಗಾಯನವಾಗಿದೆ? ಶಕ್ತಿಯರ ಚಿತ್ರಗಳಲ್ಲಿ ಸದಾ ನಯನಗಳ ಶೋಭೆಯನ್ನು ತಾವು ನೋಡುತ್ತೀರಿ. ಮತ್ತಾವುದೂ ಇಂತಹ ಆಕರ್ಷಣೆಯ ಅಂಗವಿರುವುದಿಲ್ಲ. ನಯನಗಳ ಮೂಲಕವೇ ಎಲ್ಲಾ ಭಾವಗಳನ್ನು ಪ್ರಸಿದ್ಧ ಮಾಡುತ್ತಾರೆ. ಅಂದಮೇಲೆ ದೃಷ್ಟಿಯಿಂದ ಪರಿವರ್ತನೆ ಮಾಡುವ ಈ ಸೇವೆಯು ಶಕ್ತಿಯರ ಗಾಯನವಾಗಿದೆ. ನಯನಗಳ ಆಕರ್ಷಣೆಯಿರಲಿ, ನಯನಗಳಲ್ಲಿ ಆತ್ಮೀಯತೆಯಿರಲಿ, ನಶೆಯಿರಲಿ, ನಯನಗಳಲ್ಲಿ ದಯೆ ತುಂಬಿರಲಿ- ಇಂತಹ ಪ್ಲಾನನ್ನು ಮಾಡಬೇಕಾಗಿದೆ .

ಇಲ್ಲಿ ಮಧುಬನದಿಂದ ಯಾವ ವಿಶೇಷ ಆತ್ಮರು ಹೊರಡುವರೋ ಅವರಿಂದ ತಮ್ಮ ರಚನೆಗೆ ಅನುಭವವಾಗಲಿ- ಈ ಶಕ್ತಿಸೇನೆಯು ತಮ್ಮಲ್ಲಿ ಶಕ್ತಿಯನ್ನು ಪ್ರತ್ಯಕ್ಷ ಮಾಡುವ ಪ್ರಭಾವವನ್ನು ತುಂಬಿಸಿಕೊಂಡು ಬಂದಿದ್ದಾರೆ. ಪ್ರಭಾವಶಾಲಿ ಚಲನೆ, ಪ್ರಭಾವಶಾಲಿ ವೃತ್ತಿಯ ಅನುಭವ ಮಾಡಲಿ. ತಮ್ಮಮೇಲೆ ಇಡೀ ದೈವೀಪರಿವಾರದ ಉನ್ನತಿಯ ಆಧಾರವಿದೆ. ಎಲ್ಲರೂ ತಿಳಿದುಕೊಳ್ಳುತ್ತಾರೆ- ಈ ಕಾರ್ಯಕ್ರಮದ ನಂತರ ನಾವಾತ್ಮರಲ್ಲಿ ಹಾಗೂ ಸೇವೆಯಲ್ಲಿ ಉನ್ನತಿಯಾಗುವುದು ಎಂದು. ಒಂದುವೇಳೆ ಹಾಗೆಯೇ ಸಾಧಾರಣ ಕಾರ್ಯಕ್ರಮವನ್ನು ಮುಗಿಸಿಕೊಂಡು ಹೋದರೆ ಎಲ್ಲರೂ ಯೋಚಿಸುವರು. ಎಲ್ಲರ ದೃಷ್ಟಿಯಲ್ಲಿ ಏನಿದೆಯೆಂದರೆ ಈ ವಿಶೇಷ ಆತ್ಮರ ಸಂಘಟನೆಯು ಯಾವ ಶೌರ್ಯವನ್ನು ತೋರಿಸುವರು ಎಂದು. ಆದ್ದರಿಂದ ಈಗ ಅಷ್ಟೇ ಗಮನ ಕೊಡಬೇಕಾಗುವುದು.

ಒಂದು ಸೇವೆಯಲ್ಲಿ ನವೀನತೆ ಮತ್ತು ಇನ್ನೊಂದು ನಿಮಿತ್ತರಾಗಿರುವ ಆತ್ಮರಲ್ಲಿ ನವೀನತೆ ಕಂಡುಬರಲಿ ಏಕೆಂದರೆ ಸರ್ವೀಸಿನ ಎಲ್ಲಾ ಆಧಾರವು ವಿಶೇಷ ಆತ್ಮರ ಮೇಲಿದೆ. ಈಗಂತೂ ಎಲ್ಲರೂ ತಿಳಿದುಕೊಳ್ಳುತ್ತಿದ್ದಾರೆ. ಹೇಗೆ ವಿಜ್ಞಾನಿಗಳು ಶಕ್ತಿಶಾಲಿ ಅನ್ವೇಷಣೆಗಳನ್ನು ನಡೆಸುತ್ತಿದ್ದಾರೆ ಹಾಗೆಯೇ ಈ ಶಕ್ತಿಸೇನೆಯೂ ಸಹ ಶಕ್ತಿಶಾಲಿ ಸೈಲೆನ್ಸ್‌ನ ಶ್ರೇಷ್ಠ ಅಸ್ತ್ರಗಳನ್ನು ತಯಾರು ಮಾಡಿ ತೋರಿಸುತ್ತಾರೆ. ಪರಸ್ಪರ ಒಂದುಕಡೆ ಸೇರುವುದಲ್ಲ, ಎಲ್ಲರೂ ಸೇರಿ ಯಾವುದಾದರೂ ಶಕ್ತಿಶಾಲಿ ಶಸ್ತ್ರವನ್ನು ತಯಾರು ಮಾಡಬೇಕಾಗಿದೆ. ಅತೀ ಶಕ್ತಿಶಾಲಿ ವಸ್ತುವು ಅಂಡರ್‌ಗ್ರೌಂಡ್‌ನಲ್ಲಿ ಇರುತ್ತದೆ. ಹಾಗೆಯೇ ಈ ಸಂಘಟನೆಯೂ ಸಹ ಅಂಡರ್‌ಗ್ರೌಂಡ್ ಆಗಿದೆ. ಅಂತರ್ಮುಖತೆಯಲ್ಲಿ ಒಳಗಡೆ ಹೋಗಿ ಯೋಚಿಸಬೇಕಾಗಿದೆ. ಯಾವುದಾದರೂ ಚಮತ್ಕಾರವನ್ನು ತೋರಿಸಬೇಕಾಗಿದೆ. ಸಾಮಾನ್ಯ ಸಂಘಟನೆಯನ್ನಂತೂ ಎಲ್ಲರೂ ಮಾಡುತ್ತಿರುತ್ತಾರೆ. ಒಂದುವೇಳೆ ತಾವೂ ಸಹ ಸಾಮಾನ್ಯವಾಗಿರುವುದನ್ನೇ ಮಾಡಿದರೆ ಚಮತ್ಕಾರವನ್ನು ಯಾರು ತೋರಿಸುವರು? ಇಂತಹ ಶಸ್ತ್ರಗಳನ್ನು ತಯಾರು ಮಾಡಬೇಕು ಆದ್ದರಿಂದಲೇ ಶಕ್ತಿಯೆಡೆಗೆ ಶಸ್ತ್ರಗಳನ್ನು ಅವಶ್ಯವಾಗಿ ತೋರಿಸುತ್ತಾರೆ. ಈಗ ಸಂಹಾರಿಯಾಗಿ, ತನ್ನ ಸಂಸ್ಕಾರಗಳ ಸಂಹಾರ ಹಾಗೂ ಆತ್ಮರ ತಮೋಗುಣಿ ಸಂಸ್ಕಾರಗಳ ಸಂಹಾರಿಯಾಗಿ. ಶಂಕರನ ಪಾತ್ರವನ್ನು ಪ್ರ್ಯಾಕ್ಟಿಕಲ್‌ನಲ್ಲಿ ಈಗ ಅಭಿನಯಿಸಬೇಕಾಗಿದೆ ಆದರೆ ಶಕ್ತಿಯರು ಸಂಹಾರದ ಪಾತ್ರವನ್ನು ಅಭಿನಯಿಸುತ್ತಾರೆ, ಶಂಕರನಲ್ಲ. ಶಕ್ತಿಯರು ಸಂಹಾರಿರೂಪವನ್ನು ಧಾರಣೆ ಮಾಡಿಕೊಳ್ಳಬೇಕು. ಆದರಿಂದ ಸಂಹಾರ ಮಾಡಬೇಕಾಗಿದೆ. ಕರ್ತವ್ಯ ಮಾಡಿದ್ದೀರಿ. ಈಗ ಈ ರೂಪವನ್ನು ತೋರಿಸಿ ಈ ರೂಪವನ್ನು ಧಾರಣೆ ಮಾಡಿಕೊಂಡಾಗ ಫಲಿತಾಂಶವೇನಾಗುವುದು? ತಮ್ಮ ಯಾವ ರಚನೆಯಿದೆಯೋ ಅವರು ಅನುಭವ ಮಾಡುವರು- ದಿನ-ಪ್ರತಿದಿನ ನಮಗೆ ಎಕ್ಸ್‌ಟ್ರಾ ಲಿಫ್ಟ್ ಸಿಗುತ್ತಿದೆ ಎಂದು ಯಥಾಶಕ್ತಿ ತನ್ನ ಫೋರ್ಸನ್ನು ತೊಡಗಿಸಿದರು. ಇನ್ನುಮುಂದೆ ತಮ್ಮ ಪರಿಶ್ರಮದಿಂದ ನಡೆಯಲು ಆಗುವುದಿಲ್ಲ. ಈಗ ಅವರಿಗೆ ವರದಾನದ ಲಿಫ್ಟ್ ಬೇಕಾಗಿದೆ. ಈ ದಿನದವರೆಗೆ ಯಾವ ಮಾತುಗಳು ಅವರಿಗೆ ಪರಿಶ್ರಮ ಎನಿಸುತ್ತಿತ್ತೋ ಅವು ಈಗ ತಮ್ಮೆಲ್ಲರ ಈ ಶಕ್ತಿಶಾಲಿ ಸೇವೆಯಿಂದ ಅವರ ಬಾಯಿಂದ ಕಷ್ಟದ ಶಬ್ದವು ಸಮಾಪ್ತಿಯಾಗಲಿ. ಎಲ್ಲಾ ಮಾತುಗಳಲ್ಲಿ ಸಹಜ ಅನುಭವವಾಗಲಿ. ಯಾವಾಗ ಇದನ್ನು ತಮ್ಮ ರಚನೆಯಲ್ಲಿ ನೋಡುತ್ತೀರೋ ಆಗ ತಿಳಿದುಕೊಳ್ಳಿರಿ ನಾವು ಸಂಹಾರಿರೂಪ ಆಗಿದ್ದೇವೆ ಎಂದು. ಸ್ಪಷ್ಟವಾದ ರಿಸಲ್ಟ್ ಕಾಣಿಸಲಿ. ಆಗ ಬಿರುಗಾಳಿಯು ಬಿರುಗಾಳಿಯೆನಿಸದೆ ಬಳುವಳಿಯೆನಿಸುವುದು. ಈ ರೀತಿ ರೂಪವು ಪರಿವರ್ತನೆಯಾದಾಗಲೇ ತಮ್ಮ ನಿಜವಾದ ಸ್ಥಿತಿಯ ಸಾಕ್ಷಾತ್ಕಾರ ಮಾಡಿಸುತ್ತಿದ್ದೇವೆಂದು ತಿಳಿಯಿರಿ.

ಎಲ್ಲಾ ಧಾರಣೆಗಳ ಮಾತುಗಳಲ್ಲಿ ಮುಖ್ಯವಾದ ಧಾರಣೆಯ ಯಾವ ಮಾತನ್ನು ಎಲ್ಲರಿಗೂ ಹೇಳುತ್ತೀರಿ? ಅವಕ್ತರಾಗಬೇಕೆಂದರೂ ಯಾವ ಪಾಯಿಂಟನ್ನು ಕೊಡುತ್ತೀರಿ? ತಂದೆಯನ್ನು ನೆನಪು ಮಾಡುವ ಉಮ್ಮಂಗವು ಹೇಗೆ ಬರುವುದು? ಅದಕ್ಕಾಗಿ ಮುಖ್ಯಮಾತಾಗಿದೆ- ಸತ್ಯತೆ ಹಾಗೂ ಸ್ವಚ್ಛತೆ, ಪರಸ್ಪರ ಒಬ್ಬರು ಇನ್ನೊಬ್ಬರ ಭಾವವನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದು ಆವಶ್ಯಕವಾಗಿದೆ. ವಿಶೇಷ ಆತ್ಮರಿಗಾಗಿ ಸತ್ಯತೆ, ಸ್ವಚ್ಛತೆ ಶಬ್ದದ ಅರ್ಥವೂ ಗುಹ್ಯವಾಗಿದೆ. ಒಬ್ಬರಪ್ರತಿ ಇನ್ನೊಬ್ಬರಿಗೆ ಹೃದಯದಲ್ಲಿ ಸಂಪೂರ್ಣ ಸ್ಪಷ್ಟತೆಯಿರಲಿ. ಹೇಗೆ ಯಾವುದಾದರೊಂದು ತುಂಬಾ ಸ್ವಚ್ಛವಾದ ವಸ್ತುವಿನಲ್ಲಿ ಎಲ್ಲವೂ ಸ್ಪಷ್ಟವಾಗಿ ಕಾಣುತ್ತದೆಯಲ್ಲವೆ. ಹಾಗೆಯೇ ಒಬ್ಬರಿಗೆ ಇನ್ನೊಬ್ಬರ ಭಾವನೆ, ಭಾವ-ಸ್ವಭಾವ ಸ್ಪಷ್ಟವಾಗಿ ಕಾಣಿಸಲಿ. ಎಲ್ಲಿ ಸತ್ಯತೆ, ಸ್ವಚ್ಛತೆಯಿರುವುದೋ ಅಲ್ಲಿ ಸಮೀಪತೆಯಿರುತ್ತದೆ. ಹೇಗೆ ಬಾಪ್ ದಾದಾರವರಿಗೆ ಸಮೀಪ ಇರುತ್ತಾರೆ. ರಾಜ್ಯಭಾರ ಕೇವಲ ಒಬ್ಬರಿಂದ ನಡೆಯುತ್ತಿಲ್ಲ. ಪರಸ್ಪರ ಸಂಬಂಧದಲ್ಲಿ ಬರಬೇಕಾಗುತ್ತದೆ. ಅಲ್ಲಿಯೂ ಪರಸ್ಪರ ಸಮೀಪ ಸಂಬಂಧದಲ್ಲಿ ಬರುವರು? ಇಲ್ಲಿನ ಹೃದಯದ ಸಮೀಪತೆಯಿದ್ದಾಗ, ಇಲ್ಲಿನ ಹೃದಯದ ಸಮೀಪತೆ ಅಲ್ಲಿನ ಸಮೀಪತೆಯನ್ನು ತರುವುದು. ಒಬ್ಬರು ಇನ್ನೊಬ್ಬರ ಸ್ವಭಾವ, ಮನಸ್ಸಿನ ಭಾವ ಎರಡರಲ್ಲಿ ಸಮೀಪತೆಯಿರಬೇಕು. ಸ್ವಭಾವದ ಭಿನ್ನತೆಯ ಕಾರಣ ದಿಂದಲೇ ಸಮೀಪತೆಯಿರುವುದಿಲ್ಲ. ಯಾರಾದರೂ ರಮಣೀಕವಾಗಿದ್ದರೆ ಸಮೀಪತೆಯಿರುವುದು. ಗಂಭೀರತೆಯಿದ್ದರೆ ಸಮೀಪತೆಯಿರುವುದಿಲ್ಲ. ಆದರೆ ಇಲ್ಲಂತೂ ಸರ್ವಗುಣ ಸಂಪನ್ನ, 16 ಕಲಾ ಸಂಪೂರ್ಣ ರಾಗಬೇಕಲ್ಲವೆ. ಈ ಕಲೆಯೂ ಕಡಿಮೆಯೇಕೆ? ತಿಳಿದುಕೊಳ್ಳಿ. ತಮ್ಮ ನಿಜಸಂಸ್ಕಾರವು ಗಂಭೀರತೆಯಾಗಿದೆ ಆದರೆ ಸಮಯ, ಸಂಘಟನೆ, ರಮಣೀಕತೆಯನ್ನು ತರುತ್ತದೆ. ಅಂದಮೇಲೆ ಸ್ವಭಾವವನ್ನು ಮಿಲನ ಮಾಡುವ ಈ ಕಲೆಯೂ ಇರಬೇಕು. ಇದರಿಂದಲೇ 16

ಕಲಾ ಸಂಪನ್ನರಾಗುವಿರಿ. ಮನಸ್ಸಿನ ಭಾವವನ್ನೂ ಹೊಂದಾಣಿಕೆ ಮಾಡಬೇಕು, ಸ್ವಭಾವವನ್ನೂ ಸೇರಿಸಬೇಕು. ಆಗಲೇ ಸಮೀಪ ಬರುತ್ತೀರಿ. ಈಗಿನ್ನೂ ಭಿನ್ನತೆ ಕಾಣಿಸುತ್ತದೆ. ಒಬ್ಬೊಬ್ಬರ ನಿಜಸ್ವಭಾವದಲ್ಲಿ ಇನ್ನೂ ಅಂತರವಿದೆ. ಇದು ಸಂಪೂರ್ಣತೆಯ ಚಿಹ್ನೆಯಲ್ಲ, ಎಲ್ಲಾ ಕಲೆಗಳು ತುಂಬಬೇಕು. ಕೆಲವರ ಸ್ವಭಾವ ಗಂಭೀರವಾಗಿದ್ದರೆ, ಇದೂ ಸಹ ಕಲೆ ಕಡಿಮೆಯೆಂದು ತಿಳಿದುಕೊಳ್ಳಿರಿ. ಯಾರೊಂದಿಗಾದರೂ ಮಾತನಾಡುವುದಿಲ್ಲವೆಂದರೆ ಇದೂ ಸಹ ಕಲೆ ಕಡಿಮೆಯೇ. 16 ಕಲಾ ಸಂಪೂರ್ಣ ಅರ್ಥಾತ್ ಸಂಪೂರ್ಣ ಸ್ಥಿತಿಯಿದೆಯೆಂದರೆ ಸರ್ವಕಲೆಗಳು ಸ್ವಭಾವದಲ್ಲಿ ಇರಬೇಕು. ಅವರಿಗೆ 16 ಕಲಾ ಸಂಪೂರ್ಣರೆಂದು ಹೇಳುತ್ತಾರೆ. ಈ ಸಂಘಟನೆಯು ಸ್ವಭಾವವನ್ನು ಹಾಗೂ ಭಾವವನ್ನು ಸಮೀಪ ತರಬೇಕಾಗಿದೆ. ಇದು ನನ್ನ ಸ್ವಭಾವ ಅಥವಾ ನನಗೆ ಈ ರೀತಿಯ ಭಾವವಿರಲಿಲ್ಲ ಎಂದು ಕೆಲಕೆಲವೊಮ್ಮೆ ಹೇಳುತ್ತಾರಲ್ಲವೆ ಅಂದಮೇಲೆ ಈ ಮನಸ್ಸಿನ ಭಾವನೆಗಳೂ ಸಹ ಪರಸ್ಪರ ಹೊಂದಾಣಿಕೆ ಆಗಬೇಕು. ಸಂಪೂರ್ಣತೆ ಒಂದೇ ಆಗಿದೆ ಅಂದಮೇಲೆ ಭಾವ-ಸ್ವಭಾವಗಳೂ ಒಂದೇ ಆಗಬೇಕು. ಹೇಗೆ ಗಾಯನವಿದೆಯಲ್ಲವೆ - ಇವರು ಒಂದೇಭಾಷೆಯನ್ನು ಮಾತನಾಡುತ್ತಾರೆ, ಒಂದೇಶೈಲಿಯಾಗಿದೆ ಎಂದು ಪ್ರಸಿದ್ಧವಾಗಿದೆಯಲ್ಲವೆ. ಹಾಗೆಯೇ ಈಗ ಈ ಪ್ರಸಿದ್ಧಿಯು ಕಾಣಿಸಬೇಕು.

ಸರ್ವಶ್ರೇಷ್ಠ ಆತ್ಮರ ಮನಸ್ಸಿನ ಭಾವನೆ ಹಾಗೂ ಸ್ವಭಾವ ಒಂದೇಕಡೆಯವರು ಎಂಬಂತೆ ಕಾಣಿಸಲಿ, ಸತ್ಯತೆ, ಸ್ವಚ್ಛತೆಯ ಅರ್ಥವನ್ನು ಸಾಧಾರಣವಾಗಿ ತೆಗೆದುಕೊಳ್ಳಬಾರದು. ಎಷ್ಟು ಸ್ವಚ್ಛತೆಯಿರುವುದೋ ಅಷ್ಟು ಹಗುರತೆಯಿರುವುದು. ಎಷ್ಟು ಹಗುರವಾಗಿರುವರೋ ಅಷ್ಟು ಒಬ್ಬರು ಇನ್ನೊಬ್ಬರ ಸಮೀಪ ಬರುವರು ಮತ್ತು ಅನ್ಯರನ್ನೂ ಹಗುರರನ್ನಾಗಿ ಮಾಡುವರು. ಹಗುರತೆ ಇರುವಕಾರಣ ಚಹರೆಯಿಂದ ಪ್ರಕಾಶ ಕಾಣಿಸುವುದು. ಅಂದಮೇಲೆ ಈಗ ಈ ಪರಿವರ್ತನೆಯನ್ನು ತನ್ನಿರಿ. ಮೊದಲು ತಮ್ಮ ಚಹರೆಯಿಂದ ಹೆಚ್ಚು ಸಾಕ್ಷಾತ್ಕಾರವಾಗುತ್ತಿತ್ತು. ಪ್ರಕಾಶ ಕಾಣಿಸುತ್ತಿತ್ತು. ಆ ಆರಂಭದ ಸೇವೆಯ ಸ್ಮೃತಿ ತಂದುಕೊಳ್ಳಿರಿ, ಬಹಳ ಸಾಕ್ಷಾತ್ಕಾರವಾಗುತ್ತಿತ್ತು, ದೇವಿಯ ರೂಪದ ಅನುಭವ ಮಾಡುತ್ತಿದ್ದರು. ಈಗಂತೂ ಭಾಷಣಾಕಾರರೆನಿಸುತ್ತೀರಿ, ಜ್ಞಾನಪೂರ್ಣರೆನಿಸುತ್ತೀರಿ ಆದರೆ ಶಕ್ತಿಶಾಲಿ ಎನಿಸುವುದಿಲ್ಲ. ಇದನ್ನು ಈ ಸಂಘಟನೆಯಲ್ಲಿ ತುಂಬಿಸಿಕೊಳ್ಳಬೇಕಾಗಿದೆ. ಯಾವರೀತಿ ಕಾಣಿಸಬೇಕೆಂದರೆ ಈಗ ಎಲ್ಲರೂ ಅನುಭವ ಮಾಡುತ್ತಾರೆ. ಇವರಿಬ್ಬರೂ ನಿಮಿತ್ತ ಆಗಿದ್ದಾರೆ ಎಂದು (ದಾದಿ-ದೀದಿಯವರು) ಆದರೆ ಇವರು ಇಬ್ಬರಲ್ಲ, ಒಬ್ಬರಾಗಿ ಕಾಣುತ್ತಾರೆ. ಇದನ್ನು ಎಲ್ಲರೂ ಪ್ರತ್ಯಕ್ಷ ಅನುಭವ ಮಾಡುತ್ತಾರೆ. ಒಬ್ಬರು ಇನ್ನೊಬ್ಬರ ಸಮೀಪ ಬರುತ್ತಾ ಸಮಾನರಾಗುತ್ತಾ ಹೋಗುತ್ತಾರೆ. ಹೇಗೆ ಇವರಿಬ್ಬರೂ ಒಬ್ಬರಾಗಿ ಕಾಣುವರೋ ಹಾಗೆಯೇ ಎಲ್ಲರೂ ಒಂದಾಗಿ ಕಾಣಬೇಕು. ಆಗ ಮಾಲೆ ತಯಾರಾಗುವುದು. ಸ್ನೇಹದ ದಾರವು ತಯಾರಾಗಿಬಿಟ್ಟರೆ ಮಣಿಗಳು ಸಹಜವಾಗಿ ಪೋಣಿಸಲ್ಪಡುತ್ತದೆ. ಸ್ನೇಹದ ದಾರದಿಂದ ಮುತ್ತುಗಳು ಅತಿಸಮೀಪವಾಗುತ್ತವೆ ಆಗಲೇ ಮಾಲೆಯಾಗುತ್ತದೆ. ಸಮೀಪತೆಯೇ ಮಾಲೆಯನ್ನು ಮಾಡುತ್ತದೆ. ಅಂದಮೇಲೆ ಸ್ನೇಹದ ದಾರವು ತಯಾರಾಯಿತು ಆದರೆ ಈಗ ಮಣಿಗಳು ಒಬ್ಬರು ಇನ್ನೊಬ್ಬರ ಸಮೀಪ, ಮನಸ್ಸಿನ ಭಾವನೆ ಹಾಗೂ ಸ್ವಭಾವವನ್ನು ಹೊಂದಾಣಿಕೆ ಮಾಡಿಕೊಳ್ಳಬೇಕು. ಆಗ ಮಾಲೆಯು ಪ್ರತ್ಯಕ್ಷವಾಗಿ ಕಾಣುವುದು. ಇದನ್ನು ಅವಶ್ಯವಾಗಿ ಮಾಡಬೇಕು. ಈ ರೀತಿಯ ಚಮತ್ಕಾರ ಮಾಡಿ ತೋರಿಸಿ.

ದೂರ-ದೂರ ಎಲ್ಲೆಲ್ಲಿಂದ ಸೇವೆಯನ್ನು ಬಿಟ್ಟು ಬಂದಿದ್ದೀರಿ ಅಂದಮೇಲೆ ಅದರ ಪ್ರಮಾಣವನ್ನು ಅವಶ್ಯವಾಗಿ ತೋರಿಸಿರಿ. ಇಷ್ಟು ದೂರದಿಂದ ಬಂದಿದ್ದೀರಿ, ದೂರವನ್ನು (ಅಂತರವನ್ನು) ಕಳೆಯುವುದಕ್ಕಾಗಿ, ತಿಳಿಯಿತೆ! ಸರ್ವಶ್ರೇಷ್ಠ ಆತ್ಮರ ಜೊತೆಗೆ ಬಾಪ್‌ದಾದಾರವರೂ ಇದ್ದಾರಲ್ಲವೆ. ಯಾವ ಸಮೀಪ ಆತ್ಮರ ಜೊತೆಗೆ ಬಾಪ್‌ದಾದಾರವರು ಇದ್ದಾರೆಯೋ ಅಂತಹ ಗ್ರೂಪ್‌ಗಾಗಿ ಎಲ್ಲರೂ ಕಾಯುತ್ತಿದ್ದಾರೆ- ಯಾವಾಗ ಈ ಸಂಘಟನೆಯು ತಮ್ಮ ಶೌರ್ಯವನ್ನು ತೋರಿಸುವರೋ ಎಂದು. ವಿಶೇಷ ಆತ್ಮರ ಸಾಧಾರಣ ಕರ್ತವ್ಯವೂ ಸಹ ವಿಶೇಷವೆಂದು ಒಪ್ಪಲಾಗುತ್ತದೆ. ಸಾಧಾರಣವಾಗಿ ಪರಸ್ಪರ ಕುಳಿತುಕೊಂಡರೂ ಸಹ ಅವರನ್ನು ವಿಶೇಷತೆಯಿಂದ ನೋಡುತ್ತಾರೆ. ಈಗ ಯಾವುದಾದರೂ ನವೀನತೆಯ ಅನುಭವ ವಾಗುವಂತಹ ಫೋರ್ಸ್ ಸಿಗಬೇಕೆಂದು ಎಲ್ಲರೂ ಬಯಸುತ್ತಾರೆ.

ಎಲ್ಲರಿಗೆ ಶಕ್ತಿಕೊಡಲು ನಿಮಿತ್ತ ಆತ್ಮರಾಗಿದ್ದೀರಿ. ಅವರನ್ನು ಅವ್ಯಕ್ತ ಸ್ಥಿತಿಯಲ್ಲಿ ಈ ರೀತಿ ಏರಿಸಿಬಿಡಿ. ಈ ಧರಣಿಯ ಚಿಕ್ಕ-ಚಿಕ್ಕ ಮಾತುಗಳ ಆಕರ್ಷಣೆಯು ಅವರನ್ನು ಕೆಳಗಡೆ ಎಳೆಯಲೇಬಾರದು. ಮಾಯಾ ಪ್ರೂಫನ್ನಾಗಿ ಮಾಡಿಕೊಳ್ಳಿ, ಮಾಯಾಪ್ರೂಫ್ ಮಾಡಿಕೊಳ್ಳುವ ಪ್ರೂಫ್(ಪ್ರಮಾಣ)ನ್ನು ತೋರಿಸಬೇಕಾಗಿದೆ. ತಾವು ಪ್ರೂಫ್ ಆಗಿದ್ದೀರಿ. ವಿಜಯೀರತ್ನಗಳು ಹೇಗಿರುತ್ತಾರೆ ಎಂಬ ಪ್ರೂಫ್ ತೋರಿಸಿ. ಯಾರೆಲ್ಲಾ ಪ್ರೂಫ್ ಇದ್ದೀರೋ ಅವರೆಲ್ಲರೂ ಮಾಯಾಪ್ರೂಫ್ ಆಗಬೇಕು. ಆಗ ಈ ಸಂಘಟನೆಯ ಮುದ್ರೆಯೇನಾಗುವುದು? 16 ಕಲಾ ಸಂಪೂರ್ಣರಾಗಬೇಕಾಗಿದೆ. ಒಂದು ಕಲೆಯೂ ಕಡಿಮೆಯಿರಬಾರದು. ಯಾರು ಓಲ್ಡ್‌ಗೋಲ್ಡ್ ಆಗಿದ್ದಾರೆಯೋ ಅವರು ಸಹಜವಾಗಿ ಮೌಲ್ಡ್ ಆಗುವರು. ಕಲ್ತಿಯಿರುವ ಕಾರಣದಿಂದಲೇ ಮೌಲ್ಡ್ ಆಗುವುದಿಲ್ಲ. ಸಂಪೂರ್ಣ ಫುಲ್ ಪರ್ಸೆಂಟೇಜಿನ ಗೋಲ್ಡ್ ಆಗಿರಿ. ಅದಕ್ಕಾಗಿ ಸರ್ವವಿಶೇಷತೆಗಳನ್ನು ತುಂಬಿಸಿಕೊಳ್ಳಿ. ಈಗ ನೋಡಿ- ಪ್ರತಿಯೊಬ್ಬರದೂ ತಮ್ಮ ತಮ್ಮದೇ ಆದ ವಿಶೇಷತೆಯಿರುತ್ತದೆ. ಯಾವುದೇ ವಿಶೇಷ ಕಾರ್ಯವಿದ್ದರೆ ಅದಕ್ಕಾಗಿ ವಿಶೇಷ ಆತ್ಮನ ನೆನಪು ಬರುತ್ತದೆ ಆದರೆ ಈಗ ಯಾವುದೇ ಕಾರ್ಯವಿರಲಿ ಸರ್ವವಿಶೇಷ ಆತ್ಮರ ಸ್ಮೃತಿ ಬರಲಿ. ಆದ್ದರಿಂದ ಒಬ್ಬರು ಇನ್ನೊಬ್ಬರಿಗೆ ಸಹಯೋಗ ನೀಡಿ ಹಾಗೂ ಸಹಯೋಗ ಪಡೆಯಿರಿ. ಯಾವಾಗ ಈ ರೀತಿ ಬೀಜರೂಪ ಗ್ರೂಪ್ ತಯಾರಾಗುವುದೋ ಆಗ ಬೀಜದಿಂದ ವೃಕ್ಷವು ತಾನಾಗಿಯೇ ಬರುವುದು. ಈ ಸಂಘಟನೆಯು ಬೀಜರೂಪವಲ್ಲವೆ. ಸೃಷ್ಟಿಯ ಬೀಜರೂಪವಲ್ಲ ಆದರೆ ತಮ್ಮ ರಚನೆಗೆ ಬೀಜರೂಪರಾಗಿದ್ದೀರಿ. ಆದ್ದರಿಂದ ಒಂದುವೇಳೆ ಬೀಜರೂಪ ಸಂಘಟನೆಯು 16 ಕಲಾಸಂಪೂರ್ಣರಾಗಿಬಿಟ್ಟರೆ ವೃಕ್ಷವೂ ಅದೇರೀತಿ ಬರುವುದು. ಇದು ಚಿಕ್ಕ-ಚಿಕ್ಕ ಕೊರತೆಗಳಕಾರಣ ಕೆಳಗಡೆ ಉಳಿದುಕೊಳ್ಳುವ ಸಮಯವಲ್ಲ. ಒಂದುವೇಳೆ ಕೊರತೆ ಉಳಿದುಕೊಂಡರೆ ಅಂಕಗಳಲ್ಲಿಯೂ ಕಡಿಮೆಯಾಗುವಿರಿ. ಚಿಕ್ಕಚಿಕ್ಕ ಕೊರತೆಗಳ ಕಾರಣ ಈ ಸಂಘಟನೆಯು ಅಂಕಗಳಲ್ಲಿ ಕಡಿಮೆ ಬರಬಾರದು.

ಸತ್ಯವಾದ ದೀಪಾವಳಿಯನ್ನಾಚರಿಸಿರಿ, ಹಳೆಯ ಸಂಸ್ಕಾರ, ಹಳೆಯ ಸಂಕಲ್ಪ, ಹಳೆಯ ಭಾವನೆಗಳು, ಹಳೆಯ ಸ್ವಭಾವ ಎಲ್ಲವನ್ನೂ ಸಮಾಪ್ತಿ ಮಾಡಿ ಸಂಪೂರ್ಣತೆಯ ಸರ್ವವಿಶೇಷತೆಗಳ ಖಾತೆಯನ್ನು ಆರಂಭ ಮಾಡಿಕೊಂಡು ಹೋಗಿರಿ. ಮೊದಲು ವಿಶೇಷಆತ್ಮರು ದೀಪಾವಳಿಯನ್ನು ಆಚರಿಸುತ್ತೀರಿ ನಂತರ ಅನ್ಯರು ಆಚರಿಸುವರು. ಈ ಇಡೀ ಭಟ್ಟಿಯೇ ಟೀಚರ್ಸ್‌ದಾಗಿದೆ. ಪ್ರತಿಯೊಬ್ಬರ ಫೀಚರ್‌ನಿಂದ ಈ ಫ್ಯೂಚರ್ ಕಾಣಿಸಲಿ ಆಗ ಏನಾಗುವರು? ಫ್ಯೂಚರ್ ಪ್ರೆಸೆಂಟ್ ಆಗಿಬಿಡುವುದು, ಒಳ್ಳೆಯದು-

ಅವ್ಯಕ್ತ ಮುರಳಿ 09-10-1971.

***ಶಕ್ತಿಶಾಲಿ ವೃತ್ತಿಯಿಂದ ಸೇವೆಯಲ್ಲಿ ವೃದ್ಧಿ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ಶ್ರೇಷ್ಠ ಆತ್ಮನಾದ ನನ್ನ ಸುತ್ತಮುತ್ತಲಿನ ಆತ್ಮೀಯತೆಯ ವಾಯುಮಂಡಲವು ಆತ್ಮರನ್ನು ನನ್ನ ಕಡೆಗೆ ಸೆಳೆದಿದೆ.

2. ನನ್ನ ದಯೆ ಮತ್ತು ಕಲ್ಯಾಣದ ವೃತ್ತಿಯಿಂದ ಪ್ರತಿಯೊಂದು ಆತ್ಮ ಶಕ್ತಿಶಾಲೀ ತರಂಗಗಳನ್ನು ಅನುಭವ ಮಾಡಿದೆ.

3. ನಾನು ವೃತ್ತಿ ಮತ್ತು ವಾಣಿ ಎರಡರಿಂದ ಒಟ್ಟೊಟ್ಟಿಗೆ ಸೇವೆಯನ್ನು ಮಾಡಿದ್ದೇನೆ.

4. ನಾನು ನನ್ನ ವೃತ್ತಿಯ ಮೂಲಕ ಆತ್ಮೀಯತೆಯ ಮುತ್ತಿಗೆಯಿಂದ ವಿಶ್ವದಲ್ಲಿರುವ ಸಹೋದರರನ್ನು ಆತ್ಮಿಕ ಆಕರ್ಷಣೆಯಿಂದ ಬಂಧಿಸಿದ್ದೇನೆ.

5. ನನ್ನ ವೃತ್ತಿಯಲ್ಲಿ, ಕೇಳುವುದರಲ್ಲಿ, ನೋಡುವುದರಲ್ಲಿ, ಯೋಚಿಸುವುದರಲ್ಲಿ ಒಬ್ಬರ ವಿನಃ ಮತ್ಯಾರೂ ಇಲ್ಲ.

6. ನಾನು ಜ್ಞಾನದ ಶಕ್ತಿಯನ್ನು ಪ್ರತ್ಯಕ್ಷ ಮಾಡುವ ಸಮರ್ಥತೆಯಿಂದ ಸಮರ್ಥ ಆತ್ಮರನ್ನು ತಯಾರು ಮಾಡಿದ್ದೇನೆ.

7. ನನ್ನ ಚಹರೆಯಿಂದ ಅಂತರ್ಮುಖತೆ, ತಪಸ್ವೀ ರೂಪ, ಬೇಹದ್ ವೈರಾಗ್ಯದ ರೇಖೆಗಳು ಕಾಣಿಸುವಂತಹ ನಶೆಯುಳ್ಳ ಯೋಗಿ.

8. ನಾನು ಆಲ್ಮೈಟಿ ಅಥಾರಿಟಿಯ ರೂಪ , ಸರ್ವ ಗುಣ, ಸರ್ವಶಕ್ತಿಗಳಿಂದ ತುಂಬಿರುವ ಚಹರೆಯುಳ್ಳ ಸೇವಾಧಾರಿ.

9. ನಾನು ಎಕ್ಸ್ಟ್ರಾ ಫೋರ್ಸ್ (ಶಕ್ತಿ) ನಿಂದ ಸರ್ವಾತ್ಮರನ್ನು ಹೈಜಂಪ್ ಮಾಡಿಸಿದ್ದೇನೆ. ಮತ್ತು ಶಕ್ತಿ ಸ್ವರೂಪರನ್ನಾಗಿ ತಯಾರು ಮಾಡಿರುವ ಶಕ್ತಿಯ ವರದಾತ ಆಗಿದ್ದೇನೆ.

10. ನಾನು ಒಂದೇ ಏಟಿಗೆ ವಾಯುಮಂಡಲದಿಂದ ಅಸುರೀ ಸಂಸ್ಕಾರಗಳನ್ನು ಸಮಾಪ್ತಿ ಮಾಡುವ ದಯಾ ಹೃದಯಿ ಮತ್ತು ಶಕ್ತಿ ರೂಪ.

11. ನಾನು ನನ್ನ ಮತ್ತು ಸರ್ವಾತ್ಮರ ತಮೋಗುಣಿ ಸಂಸ್ಕಾರಗಳ ಸಂಹಾರಿಯಾಗಿ ಶಂಕರನ ಪಾತ್ರವನ್ನು ಪ್ರಾಕ್ಟಿಕಲ್ ನಲ್ಲಿ ಅಭಿನಯಿಸಿದ್ದೇನೆ.

12. ನಾನು ಮನಸ್ಸಿನ ಭಾವನೆ ಮತ್ತು ಸ್ವಭಾವವನ್ನು ಹೊಂದಾಣಿಕೆ ಮಾಡಿಕೊಂಡು 16 ಕಲಾ ಸಂಪನ್ನವಾಗಿ ಬ್ರಹ್ಮಾ ತಂದೆಗೆ ಸಮೀಪ ಬರುವ ರತ್ನವಾಗಿದ್ದೇನೆ.

13. ನಾನು ಸ್ನೇಹವೆಂಬ ದಾರದಿಂದ ಮಣಿಗಳನ್ನು ಪೋಣಿಸಿ, ಮಾಲೆಯನ್ನು ತಯಾರು ಮಾಡಲು ಸಂಪೂರ್ಣ ಸಹಯೋಗವನ್ನು ಕೊಟ್ಟಿರುವ ಚಮತ್ಕಾರಿ.

14. ನಾನು ಸರ್ವ ವಿಶೇಷತೆಗಳನ್ನು ಧಾರಣೆ ಮಾಡಿಕೊಂಡಿರುವ 16 ಕಲಾ ಸಂಪೂರ್ಣ ಸ್ವರೂಪ.

15. ನಾನು ಹಳೆಯ ಸಂಸ್ಕಾರ, ಹಳೆಯ ಸಂಕಲ್ಪ, ಹಳೆಯ ಭಾವನೆ, ಹಳೆಯ ಸ್ವಭಾವ ಎಲ್ಲವನ್ನೂ ಸಮಾಪ್ತಿ ಮಾಡಿ ಸಂಪೂರ್ಣತೆಯ ಸರ್ವ ವಿಶೇಷತೆಗಳ ಖಾತೆಯನ್ನು ಆರಂಭ ಮಾಡಿಕೊಂಡಿದ್ದೇನೆ.